# ಅಕ್ಷಯ ಪಾತ್ರೆ



ನಟ ಅಕ್ಷಯ್ ಕುಮಾರ್ ಕುಟುಂಬ ಸಮೇತ ವಿದೇಶ ಪ್ರವಾಸದಿಂದ ವಾಪಸ್ ಬಂದ ಬಳಿಕ ಮತ್ತೆ ಬಾಲಿವುಡ್‌ನಲ್ಲಿ ಬಿಡುವಿಲ್ಲದ ದುಡಿತದಲ್ಲಿ ಬ್ಯುಸಿ. 2017ರಲ್ಲಿ ಸಾಕಷ್ಟು ಯಶಸ್ಸು ಕಂಡ ಅಕ್ಷಯ್‌ಗೆ 2018 ಕೂಡಾ ಕೈತುಂಬ ಕೆಲಸ ಕೊಟ್ಟಿದೆ.

2018ರಲ್ಲಿ ಬಿಡುಗಡೆಯಾಗಲಿರುವ ಸಿನಿಮಾಗಳ ಪೈಕಿ ಖಾನ್‌ತ್ರಯರ ಮೂರು ಚಿತ್ರಗಳ ಬಗ್ಗೆ ಬಾಲಿವುಡ್‌ನಲ್ಲಿ ನಿರೀಕ್ಷೆಗಳು ಗರಿಗೆದರಿವೆ. ಸಲ್ಮಾನ್ ಖಾನ್‌ನ 'ರೇಸ್ 3', ಅಮೀರ್ ಖಾನ್‌ನ 'ಥಗ್ಸ್ ಆಫ್ ಹಿಂದೂಸ್ತಾನ್' ಮತ್ತು ಶಾರೂಕ್ ಖಾನ್‌ನ 'ಝೀರೊ' ಈ ಮೂರು ಚಿತ್ರಗಳು. ಆದರೆ ದುಡಿಮೆಯ ವಿಷಯದಲ್ಲಿ ಅಕ್ಷಯ ಕುಮಾರ್ ಈ ಮೂವರೂ ಖಾನ್‌ಗಳಿಗಿಂತ ಈ ವರ್ಷವೂ ಒಂದು ಹೆಜ್ಜೆ ಮುಂದೆಯೇ. 'ಪ್ಯಾಡ್‌ಮ್ಯಾನ್', '2.0' 'ಗೋಲ್ಡ್' ಮತ್ತು 'ಮೊಘಲ್'– ಹೀಗೆ ನಾಲ್ಕು ಚಿತ್ರಗಳಲ್ಲಿ ಅಕ್ಷಯ್ ಬ್ಯುಸಿ. ಕೊನೆಯ ಮೂರು ಚಿತ್ರಗಳು ಯಾವ ತಿಂಗಳಲ್ಲೇ ಬಿಡುಗಡೆಯಾದರೂ ಖಾನ್‌ತ್ರಯರ ಚಿತ್ರಗಳಿಗೆ ತೀವ್ರ ಸ್ಪರ್ಧೆ ನೀಡುವುದು ಖಚಿತ. 51ರ ಹರೆಯದಲ್ಲೂ 35ರ ತರುಣನಂತೆ ಕಂಗೊಳಿಸುತ್ತಿರುವ ಅಕ್ಷಯ್ ಚಿತ್ರಗಳು ಬಾಕ್ಸಾಫೀಸ್‌ನಲ್ಲೂ ಹಿಟ್ ಆಗಿ ನಿರ್ಮಾಪಕರನ್ನು ಸಲಹುತ್ತಿವೆ.

# ದೀಪಿಕಾ ಫಸ್ಟ್!



ಇರೋಳೊಬ್ಬಳೇ ದೀಪಿಕಾ, ಯಾರ ಸಿನಿಮಾದಲ್ಲೆಂದು ನಟಿಸಿಯಾಳು? ಆದರೆ, ಬಾಲಿವುಡ್‌ನಲ್ಲಿ ಈಗ ಎಲ್ಲ ನಿರ್ಮಾಪಕರಿಗೂ ದೀಪಿಕಾಳೇ ಬೇಕು! ಆಕೆಯ ಕಾಲ್‌ಶೀಟ್ ಸಿಗೋದೇ ಇಲ್ಲ ಎಂದಾದಲ್ಲಿ ಮಾತ್ರ ಕತ್ರೀನಾ, ಅಲಿಯಾ ಎಂದು ಎರಡನೆಯ ಆಯ್ಕೆಯತ್ತ ಹೊರಳುತ್ತಾರೆ!

ಸಂಜಯ್ ಲೀಲಾ ಬನ್ಸಾಲಿ ನಿರ್ದೇಶನದ 'ಪದ್ಮಾವತ್'ಅನ್ನು ನಿಷೇಧಿಸಲು ಸುಪ್ರಿಂಕೋರ್ಟ್ ನಿರಾಕರಿಸಿದ್ದು, ಬಿಡುಗಡೆಯ ಕಂಟಕ ದೂರವಾಗಿದೆ. 'ಪದ್ಮಾವತ್' ಬಿಡುಗಡೆಯ ಬೆನ್ನಲ್ಲೇ ಬನ್ಸಾಲಿ ಇದೀಗ ಹೊಸ ಚಿತ್ರವೊಂದನ್ನು ಕೈಗೆತ್ತಿಕೊಳ್ಳಲು ಸಿದ್ಧರಾಗಿದ್ದಾರೆ. ಈ ಚಿತ್ರಕ್ಕೆ ಶಾರೂಕ್ ನಾಯಕ ಎನ್ನುವುದು ಹಿಂದೆಯೇ ನಿಶ್ಚಯವಾಗಿದೆ. ಬನ್ಸಾಲಿಯ ಡೇಟ್ ಸಿಗುವುದೇ ಕಷ್ಟವಾದ್ದರಿಂದ ಚಿತ್ರವನ್ನು ಮುಂದೂಡಲಾಗಿತ್ತು.



'ದೇವದಾಸ್' ಸಿನಿಮಾ ಬಿಡುಗಡೆಯಾದ 15 ವರ್ಷಗಳ ಬಳಿಕ ಈಗ ಶಾರೂಕ್– ಬನ್ಸಾಲಿ ಜೋಡಿ ಮೊದಲ ಬಾರಿಗೆ ಈ ಚಿತ್ರಕ್ಕೆ ಒಟ್ಟಾಗುತ್ತಿದೆ. ಈ ಸಿನಿಮಾಕ್ಕೆ ದೀಪಿಕಾ ಡೇಟ್ ಸಲುವಾಗಿ ಬನ್ಸಾಲಿ ಯತ್ನಿಸುತ್ತಿದ್ದಾರಂತೆ. ಆದರೆ ದೀಪಿಕಾ ಇನ್ನೂ 'ಯೆಸ್' ಅಂದಿಲ್ಲ. ಏಕೆಂದರೆ ಆಕೆ ಒಪ್ಪಿಕೊಂಡ ಚಿತ್ರಗಳ ಚಿತ್ರೀಕರಣದ ದಿನಾಂಕ ಹೊಂದಾಣಿಕೆ ಆಗುತ್ತಿಲ್ಲ. ಈ ಮಧ್ಯೆ 'ಬಾಹುಬಲಿ' ಖ್ಯಾತಿಯ ನಟ ಪ್ರಭಾಸ್ ನಟಿಸಿದ 'ಸಾಹೂ' ಎಂಬ ತ್ರಿಭಾಷಾ ಚಿತ್ರದ ಶೂಟಿಂಗ್ ಮುಗಿಯುತ್ತಾ ಬಂದಿದೆ. ಈಗ ಅವರು ಇನ್ನೊಂದು ಬಾಲಿವುಡ್ ಚಿತ್ರದಲ್ಲಿ ನಟಿಸಲು ಸಿದ್ಧರಾಗಿದ್ದಾರೆ. ತಮಾಷೆಯೆಂದರೆ ಈ ಚಿತ್ರಕ್ಕೆ ಪ್ರಭಾಸ್ ಸಹಿ ಹಾಕಿ ಆಗಲೇ ಮೂರು ವರ್ಷಗಳಾಗಿವೆ. 'ಬಾಹುಬಲಿ'ಯಿಂದಾಗಿ ಇಷ್ಟು ತಡವಾಗಿದೆ. ಈಗ ಪ್ರಭಾಸ್ ರೆಡಿ; ಆದರೆ ಹೀರೋಯಿನ್ ರೆಡಿ ಆಗಿಲ್ಲ! ಈ ಚಿತ್ರದ ಹೀರೋಯಿನ್ ದೀಪಿಕಾ ಆಗಬೇಕು ಎನ್ನುವುದು ನಿರ್ಮಾಪಕರ ಆಸೆ. ಆದರೆ ದೀಪಿಕಾ ಡೇಟ್ಸ್ ಹೊಂದಾಣಿಕೆ ಆಗುತ್ತಿಲ್ಲ!

ಸಲ್ಮಾನ್ ಖಾನ್ ಜತೆಗೆ ಈವರೆಗೆ ಹಿಂದಿಯ ಬಹುತೇಕ ಪ್ರಮುಖ ಹೀರೋಯಿನ್‌ಗಳು ನಟಿಸಿಯಾಗಿದೆ. ಆದರೆ ದೀಪಿಕಾ ಇನ್ನೂ ಏಕೆ ನಟಿಸಿಲ್ಲ.. ಎನ್ನುವುದು ಸಲ್ಮಾನ್ ಅಭಿಮಾನಿಗಳ ಪ್ರಶ್ನೆ. ಈ ಹಿಂದೆ 'ಶುದ್ಧಿ' ಎನ್ನುವ ಚಿತ್ರದಲ್ಲಿ ಇವರಿಬ್ಬರೂ ಜತೆಯಾಗಿ ನಟಿಸುವ ಸುದ್ದಿ ಬಂದಿತ್ತು. ಆದರೆ ಅದಾಗಲಿಲ್ಲ. ಈಗ ಮತ್ತೆ ಸಲ್ಮಾನ್– ದೀಪಿಕಾ ಜೋಡಿಯನ್ನು ಇಟ್ಟುಕೊಂಡು ಚಿತ್ರ ಮಾಡಲು ನಿರ್ಮಾಪಕರೊಬ್ಬರು ಮುಂದೆ ಬಂದಿದ್ದಾರೆ. ಸಲ್ಮಾನ್ ರೆಡಿ; ಆದರೆ ದೀಪಿಕಾ? ಕಬೀರ್ ಖಾನ್ ನಿರ್ದೇಶನದ ಹೊಸ ಚಿತ್ರದಲ್ಲೂ ಹೃತಿಕ್ ರೋಶನ್ ಜತೆ ನಟಿಸಲು ದೀಪಿಕಾ ಪಡುಕೋಣೆಯನ್ನು ಸಂಪರ್ಕಿಸಲಾಗಿದೆಯಂತೆ. ದೀಪಿಕಾ ಸಿಗದಿದ್ದರೆ ಈ ಪಾತ್ರ ಕತ್ರೀನಾ ಪಾಲಾಗಲಿದೆಯಂತೆ.

ಒಟ್ಟಾರೆ ದೀಪಿಕಾ ಕಾಲ್‌ಶೀಟ್‌ಗೆ ಡಿಮ್ಯಾಂಡೋ ಡಿಮ್ಯಾಂಡು!